## ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಡ್ಯ ವಿಭಾಗ, ಮಂಡ್ಯ

**ಸಂಖ್ಯೆ:ಬಿಯುಡಿ/ಇ.ಕಾ/ಸಿಆರ್–24/19–20 ದಿ:17–07–2019 (3ನೇ ಕರೆ)**

## " ಸಂಕ್ಷಿಪ್ತ ಟೆಂಡರ್ ಪ್ರಕಟಣೆ "

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಅನುಸೂಚಿಯಲ್ಲಿ ನಮೂದಿಸಿರುವ ವಿವಿಧ ಕಾಮಗಾರಿಗಳನ್ನು 2019–20ನೇ ಸಾಲಿನಲ್ಲಿ ಈ ವಿಭಾಗದಲ್ಲಿ ನೋಂದಾಯಿಸಿಕೊಂಡಿರುವ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ 3ನೇ ಕರೆ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ 2 ಕಾಮಗಾರಿಗಳ ಪೈಕಿ ಗರಿಷ್ಟ ಟೆಂಡರ್ ಮೊತ್ತವು ರೂ.15.120 ಲಕ್ಷ ಹಾಗೂ ಕನಿಷ್ಟ ಮೊತ್ತವು ರೂ.12.70 ಲಕ್ಷ ಆಗಿದ್ದು, ಇಎಂಡಿ ಮೊತ್ತವು ಕ್ರಮವಾಗಿ ಗರಿಷ್ಠ ರೂ.0.378 ಲಕ್ಷ ಹಾಗೂ ಕನಿಷ್ಠ ರೂ.031750 ಲಕ್ಷ ಆಗಿರುತ್ತದೆ ಟೆಂಡರನ್ನು ದಿ:27–07–2019ರಂದು ಅಪರಾಹ್ನ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:29–07–2019ರ ಅಪರಾಹ್ನ 04.30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ:30–07–2019ರಂದು ಅಪರಾಹ್ನ 5.00 ಗಂಟೆಗೆ ತೆರೆಯಲಾಗುವುದು. ಟೆಂಡರ್‌ಗಳನ್ನು ಮೇಲ್ಕಂಡಂತೆ ನಿಗಧಿತ ದಿನಾಂಕ ಹಾಗೂ ಸಮಯದಂದು ಹಾಜರಿರುವ ಟೆಂಡರ್‌ದಾರರ (ಅರಣ್ಯ ಗುತ್ತಿಗೆದಾರರ) ಸಮಕ್ಷಮ ಈ ಕೆಳಗೆ ಸಹಿ ಮಾಡಿರುವ ಅಥವಾ ಅವರಿಂದ ಪ್ರಾಧೀಕೃತಗೊಂಡ ಅಧಿಕಾರಿಗಳಿಂದ ತೆರೆದು ಓದಲಾಗುವುದು. ಟೆಂಡರ್ ದಿನಾಂಕವು ಸಾರ್ವತ್ರಿಕ ರಜೆ ಎಂದು ಘೋಷಿತವಾದಲ್ಲಿ ಮರುದಿನ ಟೆಂಡರನ್ನು ಸ್ವೀಕರಿಸಿ ಅದೇ ಸಮಯಕ್ಕೆ ತೆರೆಯಲಾಗುವುದು. ಕೆಲಸದ ವಿವರ, ಪರಿಮಾಣ, ಇಎಂಡಿ ಇತರೇ ಮಾಹಿತಿ ಬೇಕಾದಲ್ಲಿ ಮೇಲ್ಕಂಡ ಕಛೇರಿಯಿಂದ ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದು.

**2019–20ನೇ ಸಾಲಿಗೆ ನಿರ್ವಹಿಸಬೇಕಾದ ಕಾಮಗಾರಿಗಳ ವಿವರ**

| ಕ್ರ ಸಂ | ವಲಯ | ಕಾಮಗಾರಿಗಳ ವಿವರ | ಕಾಮಗಾರಿಗಳನ್ನು ನಿರ್ವಹಿಸಬೇಕಾದ ಸ್ಥಳ | ಭೌತಿಕ (ಚದರ ಅಡಿ) | ಅಂದಾಜು ಮೊತ್ತ | ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ | ಇಡಬೇಕಾದ ಇಎಂಡಿ ಮೊಬಲಗು (ಡಿ.ಡಿ ರೂಪದಲ್ಲಿ ರೂಗಳಲ್ಲಿ) |
|---|---|---|---|---|---|---|---|
| 1 | 2 | 4 | 5 | 6 | 7 | 8 | 9 |
| **4406-Capital Outlay on Forestry and Wildlife-01-Forestry-070-Communications and Buidlings -0-02-Buildings-147-Land and Buildings** | | | | | | | |
| 1 | ಪಾಂಡವಪುರ | Construction of Deputy Range forest Officer Quarters | Pandavapura Town Sy no.10 | 7.25 | 1512000.00 | 31.12.2019 | 37800.00 |
| 2 | ನಾಗಮಂಗಲ | Construction of Forest Gurard Quarters | Nagamangala | 4.25 | 1270000.00 | 31.12.2019 | 31750.00 |
| **Total** | | | - | **11.50** | **2782000.00** | | |

" **ಷರತ್ತುಗಳು** "

1 ತಾಂತ್ರಿಕ ಬಿಡ್ ಸಲ್ಲಿಸುವವರು ಕೆಳಗೆ ನಮೂದಿಸಿದ ದಾಖಲಾತಿಗಳನ್ನು ತಪ್ಪದೆ ಅಪಲೋಡ್ ಮಾಡಬೇಕು.

ಎ) 2019–20ನೇ ಸಾಲಿನಲ್ಲಿ ಈ ವಿಭಾಗದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೊಂದಾಯಿಸಿದ ಪ್ರಮಾಣ ಪತ್ರದ ಪ್ರತಿ. ಹಾಗೂ ಲೋಕೋಪೋಯೋಗಿ ಇಲಾಖೆಯಿಂದ ಪಡೆದ ಕ್ಲಾಸ್–3 ಹಾಗೂ ಅದಕ್ಕಿಂತ ಮೇಲ್ಪಟ್ಟ ಗುತ್ತಿಗೆ ನೋಂದಣಿ ಪ್ರಮಾಣ ಪತ್ರ ಲಗತ್ತಿಸುವುದು

ಬಿ) ಗುತ್ತಿಗೆದಾರರು ಈ ಹಿಂದೆ ಇದೇ ರೀತಿಯ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕನಿಷ್ಠ 5 (ಐದು) ವರ್ಷ ನಿರ್ವಹಿಸಿರುವ ಕುರಿತು ಕೈಗೊಂಡಿರುವ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಮೇಲ್ಪಟ್ಟ ಅಧಿಕಾರಿಗಳು ಅಥವಾ ಲೋಕೋಪಯೋಗಿ ಇಲಾಖೆ ಇವರಿಂದ ಪಡೆದ ಅನುಭವ ಧೃಡೀಕರಣ ಪತ್ರ ಲಗತ್ತಿಸಿರಬೇಕು. (ಇದೇ ರೀತಿಯ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಟೆಂಡರ್ ಮೊತ್ತದ ಕನಿಷ್ಠ ಶೇಕಡ 50% ರಷ್ಟು ಮೊತ್ತಕ್ಕೆ ಕಾಮಗಾರಿ ದೃಢೀಕರಣ ಪತ್ರ ಲಗತ್ತಿಸಬೇಕು)

ಸಿ) ಚಾಲ್ತಿಯಲ್ಲಿರುವ ಆದಾಯ ತೀರಿಕೆ ಪತ್ರದ ಧೃಢೀಕೃತ ಪತ್ರ (Present Income Tax Clearance certified copy)

ಡಿ) ಇದೇ ರೀತಿಯ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಿದ್ದಕ್ಕೆ ಆರ್ಥಿಕ ಚಲಾವಣೆ ಮಾಡಿದ ಸಾಮರ್ಥ್ಯವನ್ನು ದೃಢೀಕರಿಸುವ ದಾಖಲಾತಿಗಳ ಪ್ರತಿಗಳು (Financial Turnover capability) They should be achieved in at least two financial years, a minimum annual financial turnover i.e., usually not less than two times the estimated amount under the contract.

ಇ) ಟೆಂಡರ್ ಕೆಲಸದ ಅವಧಿ ಮುಗಿಯುವವರೆಗೆ ಚಾಲ್ತಿಯಲ್ಲಿರುವ ಸಾಲ ತೀರುವಳಿ ಶಕ್ತಿಪತ್ರವನ್ನು ಕಂದಾಯ ಇಲಾಖೆ ಅಥವಾ ರಾಷ್ಟ್ರೀಕೃತ ಬ್ಯಾಂಕಿನಿಂದ ಪ್ರತಿ ಕೆಲಸದ ಶೇಕಡ 30ರಷ್ಟು ಮೊತ್ತಕ್ಕೆ ಪಡೆದು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಬೇಕು.

ಎಫ್) ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಬಗ್ಗೆ ದೃಢೀಕೃತ ಪತ್ರಗಳು ಹಾಗೂ ಒಬ್ಬ ಟೆಂಡರ್‌ದಾರರಲ್ಲಿ 20 ಮಂದಿ ಕಾರ್ಮಿಕರು ಕೆಲಸ ನಿರ್ವಹಿಸಿದಲ್ಲಿ ಸದರಿ ಕಾರ್ಮಿಕರಿಗೆ ಇಪಿಎಸ ಕಾಯ್ದೆ ಅನ್ವಯ ನೊಂದಾಯಿತ ಕಾರ್ಮಿಕರಿಗೆ ಇಪಿಎಫ್ ಮತ್ತು ಇಎಸ್ಐ ಪಾವತಿಸಬೇಕಾಗಿರುವುದರಿಂದ ಟೆಂಡರ್‌ದಾರರ ಇಪಿಎಫ್–ಇಎಸ್ಐ ನೋಂದಣಿ ಪ್ರತಿ

ಜಿ)ಟೆಂಡರುದಾರರು ಕಂದಾಯ ತೆರಿಗೆ, ಮಾರಾಟ ತೆರಿಗೆ, ವೃತ್ತಿ ತೆರಿಗೆ ಹಾಗೂ ತೀರುವಳಿ ಪತ್ರಗಳನ್ನು ಸಂಬಂದಿಸಿದ ಇಲಾಖೆಗಳಿಂದ ಪಡೆದು ಟೆಂಡರಿನ ಜೊತೆಯಲ್ಲಿ ಲಗತ್ತಿಸಿರಬೇಕು.

2) ತಾಂತ್ರಿಕ ಬಿಡ್ ಜೊತೆಗೆ ನಿಗಧಿಪಡಿಸಲಾದ ದಾಖಲಾತಿಗಳನ್ನು ಅಪಲೋಡ್ ಮಾಡದಿದ್ದರೆ ಅಂತಹವುಗಳನ್ನು ತಿರಸ್ಕರಿಸಲಾಗುವುದು.

3) ಪ್ರತಿ ಯೂನಿಟ್ ಕೆಲಸಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸುವುದು.

4) ಮೇಲ್ಕಂಡ ಕಟ್ಟಡ ಕಾಮಗಾರಿಗಳನ್ನು ನಿಗಧಿಪಡಿಸಿರುವ ಲೋಕೋಪಯೋಗಿ ಇಲಾಖೆಯ ಎಸ್‌ಎಸ್‌ಆರ್ ದರದಂತೆ ನಿರ್ವಹಿಸಬೇಕು ಹಾಗೂ ದರವನ್ನು ನಮೂದಿಸುವಾಗ ಇಲಾಖಾ ದರದ ಮೇಲೆ ಶೇಕಡವಾರು ಇಷ್ಟು ಹೆಚ್ಚು, ಕಡಿಮೆ ಅಥವಾ ಎಸ್‌ಎಸ್‌ಆರ್ ದರಕ್ಕನುಗುಣವಾಗಿ ಎಂದು ದರವನ್ನು ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸಬೇಕು.

5) ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೇಲ್ಕಂಡ ಕಟ್ಟಡಗಳಿಗೆ ವಿವರಿಸಿರುವ ಚದರ ಅಡಿ ವ್ಯಪ್ತಿಯೊಳಗೆ ಅಂದಾಜು ಪಟ್ಟಿಗಳನ್ನು ಸಿದ್ದಪಡಿಸಿ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಪಡದು ಮಂಜೂರಾತಿ ನೀಡಿದ ಅಂದಾಜುಪಟ್ಟಿಯಂತೆ ಕಾಮಗಾರಿ ನಿರ್ವಹಿಸತಕ್ಕದ್ದು.

6) ಟೆಂಡರ್‌ದಾರರು ಎಸ್.ಎಸ್.ಆರ್.ಗಿಂತ ಕಡಿಮೆ ದರವನ್ನು ಬಿಡ್ಡಿಂಗ್ ಮಾಡಿದಲ್ಲಿ ಟೆಂಡರ್ ವ್ಯತ್ಯಾಸದ ಹಣವನ್ನು ಹಾಗೂ ಶೇ 5% ರಷ್ಟು ಭದ್ರತಾ ಠೇವಣಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಂಡ್ಯ ಇವರ ಹೆಸರಿನಲ್ಲಿ ಇಡುವುದು. ಟೆಂಡರು ರೀತ್ಯಾ ವಹಿಸಿದ ಕೆಲಸವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಠೇವಣಿ ಹಣವನ್ನು ನಿಯಮಾನುಸಾರ ಹಿಂದಿರುಗಿಸಲಾಗುವುದು.

7) ಅನುಸೂಚಿಯಲ್ಲಿ ನಮೂದಿಸಿರುವ ಕಾಮಗಾರಿಗಳ ಮೊತ್ತ ಅಂದಾಜಿನದಾಗಿದ್ದು ಅನುಮೋದಿತ ಕ್ರಿಯಾಯೋಜನೆ, ಅಂದಾಜು ಪಟ್ಟಿ ಮತ್ತು ಅನುದಾನ ಲಭ್ಯತೆ ಮೇಲೆ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಅನುದಾನ ಲಭ್ಯವಿಲ್ಲದ ಪಕ್ಷದಲ್ಲಿ ಅನುದಾನ ಬಿಡುಗಡೆ ನಂತರ ಪಾವತಿಸಲಾಗುವುದು. ಹೊಸ ಕಾಮಗಾರಿಗಳ ಸ್ಥಳ, ಪರಿಮಾಣ (ವಿಸ್ತೀರ್ಣ / ಸಂಖ್ಯೆ ಇತ್ಯಾದಿ)ಗಳಿಗೆ ಸೂಚಿಸಿರುವ  ಅನುದಾನ ಅಂದಾಜಿನದಾಗಿದ್ದು, ಅವುಗಳನ್ನು ಬದಲಾಯಿಸಲು ಅಥವಾ ರದ್ದುಗೊಳಿಸಲು ಈ ಕೆಳಸಹಿದಾರರು ಅಧಿಕಾರ ಹೊಂದಿರುತ್ತಾರೆ.

8) ಈ ವಿಷಯದಲ್ಲಿ ಅಂತಿಮವಾಗಿ ಯಾವುದೇ ತಿದ್ದುಪಡಿಯನ್ನು ಮಾಡುವ, ನಿಯಮ ನಿಬಂಧನೆ ಸೇರಿಸುವ ಅಧಿಕಾರ ಈ ಕೆಳಸಹಿದಾರರಿಗಿರುತ್ತದೆ. ಗುತ್ತಿಗೆದಾರರು ಇದಕ್ಕೆ ಬದ್ಧರಾಗಿರಬೇಕು.

9) ಅಪ್ರಾಪ್ತ ವಯಸ್ಕರು ಮತ್ತು ಕಾನೂನಿನನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರ್‌ನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ತಿಳಿಸದಂತೆ ಸದರಿ ವ್ಯಕ್ತಿಗಳು ಟೆಂಡರ್ ಹಾಕಿ ನಂತರ ಅದು ತಿಳಿದಲ್ಲಿ ಅಂತಹವರ ಗುತ್ತಿಗೆಯನ್ನು ಅನೂರ್ಜಿತಗೊಳಿಸಲಾಗುವುದು ಮತ್ತು ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

10) ಮೇಲ್ಕಂಡ ಕಾಮಗಾರಿಗಳಿಗೆ ಯಾವುದೇ ಮುಂಗಡ ಹಣವನ್ನು ಪಾವತಿ ಮಾಡಲಾಗುವುದಿಲ್ಲ. ಕೆಲಸಗಳನ್ನು ಆಯಾಯ ವಲಯಕ್ಕ ಸಂಬಂಧಿಸಿದಂತೆ ವಲಯ ಅರಣ್ಯಾಧಿಕಾರಿಗಳಿಂದ ಮತ್ತು ಸಂಬಂದಪಟ್ಟ ಉಪ–ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಪರಿಶೀಲನೆ ಹಾಗೂ ದೃಢೀಕರಣವನ್ನು ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು ಹಾಗೂ ಪಾವತಿಸುವ ಹಣದ ಮೇಲೆ  ಚಾಲ್ತಿಯಲ್ಲಿರುವ ತೆರಿಗೆಗಳನ್ನು (ಲೇಬರ್ ಸೆಸ್ ಹಾಗೂ ರಾಯಲ್ಟಿ) ಕಡಿತ ಮಾಡಲಾಗುವುದು. ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

11) ವಿಜೇತ ಟೆಂಡರ್‌ದಾರರು ಆದೇಶ ಕೊಟ್ಟ 7 ದಿವಸಗಳೊಳಗಾಗಿ 200 ರೂಪಾಯಿಗಳ ಛಾಪಾ ಕಾಗದಲ್ಲಿ ಮಂಡ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಮಕ್ಷಮ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

12) ಕರಾರು ಒಪ್ಪಂದ ಮಾಡಿಕೊಂಡ ಗುತ್ತಿಗೆದಾರರು ಆದೇಶ ಕೊಟ್ಟ 15 ದಿನಗಳ ಒಳಗಾಗಿ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳ ಮಾರ್ಗದರ್ಶನದಲ್ಲಿ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು.

13) ಟೆಂಡರ್ ಪ್ರಕಟಣೆಯ ಯಾವುದೇ ನಿಯಮವನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ಕೊಡದೇ ಇಡೀ ಟೆಂಡರ್‌ನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶವನ್ನು ಈ ಕೆಳಸಹಿದಾರರಿಗೆ ಕಾಯ್ದಿರಿಸಿಕೊಳ್ಳಲಾಗಿದೆ

14) ಟೆಂಡರ್‌ದಾರರು ಟೆಂಡರ್ ದಿನಾಂಕದಂದು ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದಲ್ಲಿ, ಆ ದಿನವೇ ಅರಣ್ಯ ಗುತ್ತಿಗೆದಾರರನ್ನಾಗಿ ನೊಂದಾವಣೆ ಮಾಡಲಾಗುವುದಿಲ್ಲ.

15) ಟೆಂಡರ್ ಮಂಜೂರಾತಿಯ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು. ಅಲ್ಲಿಯವರೆಗೆ 2ನೇ ಅತಿ ಕಡಿಮೆ ಟೆಂಡರ್ ದರ ನಮೂದಿಸಿರುವ ಗುತ್ತಿಗೆದಾರರ ಇ.ಎಂ.ಡಿ. ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಹಾಗೂ ಈ ಅವಧಿಯಲ್ಲಿ ಟೆಂಡರನ್ನು ವಾಪಸ್ಸು ಪಡೆಯಲು ಅವಕಾಶವಿರುವುದಿಲ್ಲ.

16) ಅತೀ ಕಡಿಮೆ ಒಂದೇ ದರವನ್ನು ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅದರಲ್ಲಿ ಒಂದು ಟೆಂಡರನ್ನು ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಅಲ್ಲದೇ ಅಂತಹ ಟೆಂಡರ್‌ದಾರರೊಂದಿಗೆ ರಾಜಿ ಒಪ್ಪಂದ ಮಾಡಲಾಗುವುದು. ಹೀಗೆ ರಾಜಿ ಒಪ್ಪಂದದಲ್ಲಿ ತೀರ್ಮಾನಿಸಿದವರನ್ನು ಒಪ್ಪಿಕೊಳ್ಳಬೇಕಾಗುತ್ತದೆ

17) ಗುತ್ತಿಗೆದಾರರು ಗುತ್ತಿಗೆಯನ್ನು ಅಥವಾ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ. ಹಾಗೂ ವರ್ಗಾಯಿಸುವಂತಿಲ್ಲ. ಸದರು ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಉಪಗುತ್ತಿಗೆ ಅಥವಾ ವರ್ಗಾವಣೆ ನೀಡಿರುವುದು ಕಂಡುಬಂದಲ್ಲಿ ಕೂಡಲೇ ಸದರಿ ಟೆಂಡರ್ ಅನ್ನು ರದ್ದುಪಡಿಸಿ ಟೆಂಡರ್‌ದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಲಾಗುವುದು.

18) ಗುತ್ತಿಗೆ ಅವಧಿ ಮುಗಿದ ನಂತರ ಹಾಗೂ ಕಾಮಗಾರಿಗಳು ಪೂರ್ಣಗೊಂಡ ನಂತರ ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಕಾಮಗಾರಿ ತೃಪ್ತಿಕರವಾಗಿ ಪೂರ್ಣಗೊಂಡಿರುವ ಬಗ್ಗೆ ವರದಿ ಮತ್ತು ಮುಕ್ತಾಯ ವರದಿ ಸಲ್ಲಿಕೆಯಾದ ನಂತರ ಭದ್ರತಾ ಠೇವಣಿ ಮತ್ತು ಇ.ಎಂ.ಡಿ. ಹಣವನ್ನು ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಹಿಂತಿರುಗಿಸಲಾಗುವುದು

19) ಕಾಮಗಾರಿಯು ಪ್ರಗತಿಯಲ್ಲಿರುವಾಗ ಯಾವುದೇ ಕೂಲಿಯಾಳುಗಳು ದೈಹಿಕವಾಗಿ ಗಾಯಗೊಂಡಲ್ಲಿ ಕಾರ್ಮಿಕರ ಶುಶ್ರೂಷೆಗಾಗಿ ತಗಲುವ ವೆಚ್ಚ ಅಥವಾ ಮರಣ ಹೊಂದಿದಲ್ಲಿ ಅಂತಹ ಪ್ರಕರಣಗಳಿಗೆ ಪರಿಹಾರ ಧನ ನೀಡುವ ಸಂಪೂರ್ಣ ಹೊಣೆ ಗುತ್ತಿಗೆದಾರರದೇ ಆಗಿರುತ್ತದೆ.

20) ನಿಗಧಿತ ಕಾಲಾವಧಿಯೊಳಗಾಗಿ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಯಾವುದೇ ಕಾರಣಕ್ಕೂ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ

21) ಈ ಟೆಂಡರ್ ಪ್ರಕಟಣೆಯನ್ನು 2019–20ನೇ ಸಾಲಿಗೆ ವಾರ್ಷಿಕ ಕ್ರಿಯಾ ಯೋಜನೆಗಳ ಮಂಜೂರಾತಿ ನಿರೀಕ್ಷಿಸಿ ಕರೆಯಲಾಗಿದ್ದು, ಸದರಿ ವಾರ್ಷಿಕ ಕ್ರಿಯಾ ಯೋಜನೆಯ ಅನುಮೋದನೆಗೆ ಅನುಗುಣವಾಗಿ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ಪಡೆಯಲಾಗುವುದು/ನೀಡಲಾಗುವುದು

22) ಗುತ್ತಿಗೆದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರು ಅರಣ್ಯ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಲ್ಲಿ ಇದಕ್ಕೆ ಗುತ್ತಿಗೆದಾರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು

23) ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ ಸಹಿದಾರರಿಗಿರುತ್ತದೆ.

24) ನಿಯಮದಂತೆ ಕರ್ತವ್ಯ ನಿರ್ವಹಿಸಲು ವಿಫಲರಾದ ವಿಜೇತ ಟೆಂಡರುದಾರರ ಇಎಂಡಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದರ ಜೊತೆಗೆ ಅವರ ಆರ್ಥಿಕ ಜವಾಬ್ದಾರಿಯಲ್ಲಿ ಮರು ಟೆಂಡರ್ ಕರೆಯಲಾಗುವುದು.

25) ವಿಜೇತ ಟೆಂಡರುದಾರರ ಆರ್ಥಿಕ ಜವಾಬ್ದಾರಿಯಲ್ಲಿ ಟೆಂಡರನ್ನು ಕರೆದು ಕೆಲಸ ಮಾಡಿಸಿದಾಗ ಇಲಾಖೆಗೆ ಆರ್ಥಿಕ ನಷ್ಟ ಉಂಟಾದರೆ ಅಂತಹ ನಷ್ಟವನ್ನು ಮೂಲ ವಿಜೇತ ಟೆಂಡರ್‌ದಾರರು ಕಟ್ಟಿಕೊಡಬೇಕಾಗುವುದು.

26) ಈ ಕ್ರಮದಿಂದ ಇಲಾಖೆಗೆ ಆಗಬಹುದಾದ ನಷ್ಟವನ್ನು ಮೂಲ ವಿಜೇತ ಟೆಂಡರುದಾರರು ಕಟ್ಟಿ ಕೊಡಲು ವಿಫಲರಾದರೆ ಸದರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 109ರಂತೆ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

27) ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿ ಇಲ್ಲವಾದರೆ ಮೈಸೂರು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.

28) ಟೆಂಡರನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಸಹಿ ಮಾಡಿರುವವರಿಗೆ ಅಥವಾ ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ

29) ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯಲ್ಲಿ ಅಥವಾ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಂಡ್ಯ ವಿಭಾಗ, ಮಂಡ್ಯ